ಬೇರೆ. ಮಾನ್ಯ ಬೈರೇಗೌಡರು ಏನು ವಿಧಾನ ಅನುಸರಿಸಬೇಕೆಂದು ಹೇಳುತ್ತಿದ್ದಾರೆ ಅದು ಹಳೇ ಮೈಸೂರು ಭಾಗದಲ್ಲಿ ಅಪೇಕ್ಷಿತ ಕಾರ್ಯಕ್ರಮ ಹಾಗೇನೆ ಪಾಟೀಲರು ಆ ಭಾಗದಲ್ಲಿ ಕೆರೆ ಹೂಳನ್ನು ಉಪಯೋಗಿಸಲಿಕ್ಕೆ ಪರ್ಯಾಯವಾದಂಥ ಅವಕಾಶವಿಲ್ಲ ಎಂಬುದನ್ನೂ ನಾವು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಮತ್ತು ಮಾನ್ಯ ಅಧ್ಯಕ್ಷರೇ ತಾವೇನು ಸೂಚನೆ ಕೊಟ್ಟಿದ್ದೀರಿ ಅದರ ಆಧಾರದ ಮೇಲೆ ಇದರ ಬಗ್ಗೆ ಅನುಭವ ಮತ್ತು ಆಸಕ್ತಿ ಇರುವವರ ಸಭೆಯನ್ನು ಅಧಿವೇಶನ ನಡೆಯುವ ಕಾಲದಲ್ಲಿ ಕರೆದು ಇದಕ್ಕೆ ಸೂಕ್ತವಾದ ಒಂದು ಒಮ್ಮತವನ್ನು ಪಡೆಯಲು ಏರ್ಪಾಡು ಮಾಡಿ ಈ ಕಾರ್ಯ ಮುಂದುವರಿಸೋಣ.

ಅಧ್ಯಕ್ಷರು : ಮುಂದಿನ ಪ್ರಶ್ನೆ ಕೃಷ್ಣಮೂರ್ತಿಯವರದು, ಸರ್ಕಾರದವರು ಒಂದು ತಿಂಗಳು ಸಮಯ ಕೇಳಿದ್ದಾರೆ, ಬಹಳ ಉತ್ತರ ಆಗುತ್ತದಂತೆ, ಮುಂದಿನ ವಾರದೊಳಗೆ ಉತ್ತರಿಸುವಂತೆ ಸಂಬಂಧಿಸಿದ ಸಚಿವರನ್ನು ಕೇಳುತ್ತೇನೆ.

ಬೆಂಗಳೂರು ಗ್ರಾಮಾಂತರ ಬಡವರಿಗೆ ಹಸಿರು ಪಡಿತರ ಚೀಟಿ ವಿತರಣೆ

97 - ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅನೇಕ ಬಡವರಿಗೆ ಹಸಿರು ಕಾರ್ಡು ವಿತರಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಯಾವ ಯಾವ ತಾಲ್ಲೂಕಿನ ಎಷ್ಟು ಜನಕ್ಕೆ ಹಸಿರು ಪಡಿತರ ಚೀಟಿ ವಿತರಿಸಿಲ್ಲ?

ಇ) ವಿತರಣೆ ಮಾಡಲಿಲ್ಲದವರಿಗೆ ಹಸಿರು ಪಡಿತರ ಚೀಟಿ ವಿತರಿಸಲು ಸರ್ಕಾರ ತೆಗೆದುಕೊಳ್ಳಲಿರುವ ಕ್ರಮಗಳೇನು?

ಶ್ರೀ ಡಿ.ಬಿ. ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು) :

ಅ) ಹೌದು.

ಆ) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಹಸಿರು ಪಡಿತರ ಚೀಟಿಗಳಿಗಾಗಿ ಕೋರಿ ಬಂದ ಅರ್ಜಿಗಳು ಈ ಕೆಳಕಂಡಂತೆ ಬಾಕಿ ಇವೆ.

(ತಾಲ್ಲೂಕುವಾರು)

1.	ನೆಲಮಂಗಲ	-	1058
2.	ದೊಡ್ಡಬಳ್ಳಾಪುರ	-	920
3.	ಹೊಸಕೋಟೆ	-	1233
4.	ಕನಕಪುರ	-	9648

5.	ಚನ್ನಪಟ್ಟಣ	-	3298
6.	ರಾಮನಗರ	-	500
7.	ದೇವನಹಳ್ಳಿ	-	598
8.	ಮಾಗಡಿ	-	910

ಇ) ಕುಟುಂಬದ ಆದಾಯವನ್ನು ಗಮನದಲ್ಲಿಟ್ಟುಕೊಂಡು ಎಲ್ಲಾ ಅರ್ಹ ಕುಟುಂಬಗಳಿಗೆ ಹಸಿರು ಪಡಿತರ ಚೀಟಿಗಳನ್ನು ನೀಡಲು ಫೆಬ್ರವರಿ 2000ನೇ ಮಾಹೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ಈಗಾಗಲೇ ಸರ್ಕಾರ ಸೂಚನೆಗಳನ್ನು ನೀಡಿದೆ.

ಶ್ರೀ ಅಂಜನಮೂರ್ತಿ : ಅಧ್ಯಕ್ಷರೇ, ನನ್ನ ಮೊದಲನೆ ಪ್ರಶ್ನೆಗೆ ಹೌದು ಎಂದು ಸಚಿವರು ಉತ್ತರಿಸಿದ್ದಾರೆ, ಆದರೆ ಯಾವ ಕಾರಣಕ್ಕಾಗಿ ಎಷ್ಟು ಎಂಬ ವಿವರಣೆ ನೀಡಿಲ್ಲ. ಮತ್ತು ಎರಡನೇ ಪ್ರಶ್ನೆಯ ಉತ್ತರ ನೋಡಿದರೆ ಮಾನ್ಯ ಸಚಿವರಿಗೆ ಅಧಿಕಾರಿಗಳು ತಪ್ಪು ಮಾಹಿತಿ ಕೊಟ್ಟಿದ್ದಾರೆ ಎಂದು ಅನ್ನಿಸುತ್ತದೆ. ನೆಲಮಂಗಲ ತಾಲ್ಲೂಕಿನಲ್ಲಿ 1,058 ಎಂದು ಇದೆ, ಅಲ್ಲಿ ಸುಮಾರು 2 ಸಾವಿರ ಹಸಿರು ಕಾರ್ಡು ಬೇಕೆಂದು ಅರ್ಜಿ ಕೊಟ್ಟಿರುವುದು ಇದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಸುಮಾರು 5 ಸಾವಿರ ಅರ್ಜಿ ವಿಲೇ ಇಟ್ಟಿದ್ದಾರೆ. ಮತ್ತೆ, ಮೂರನೇ ಪ್ರಶ್ನೆ ಉತ್ತರದ ಬಗ್ಗೆ, ಇವತ್ತು ನಾವು ಮಾರ್ಚಿ ಅಂತ್ಯದಲ್ಲಿದ್ದೇವೆ. ಆದರೆ ಸಚಿವರು ಫೆಬ್ರವರಿ ಮಾಹೆಯಲ್ಲಿ ಚೀಟಿ ವಿತರಣೆ ಮಾಡಲು ಸೂಚನೆ ನೀಡಲಾಗಿದೆ ಎಂದು. ತಮಗಿಲ್ಲಿ ಗೊತ್ತಿರುವಂತೆ ಬಡವರಿಗೆ ಹಸಿರು ಕಾರ್ಡು ಕೊಡುತ್ತೇವೆಂದು ಬಡವರ ಹತ್ತಿರ ಇದ್ದ ಕಾರ್ಡುಗಳನ್ನು ಇಸಿದುಕೊಂಡಿದ್ದಾರೆ. ಅದು ಕೇಸರಿ ಕಾರ್ಡು, ಮತ್ತೊಂದು ಇರಬಹುದು. ಇದರಿಂದ ಹಸಿರು ಕಾರ್ಡು ಅಥವಾ ಇನ್ನೊಂದು ಇಲ್ಲದೆ ಇವತ್ತು ಬಡವರಿಗೆ ತುಂಬ ಕಷ್ಟವಾಗಿದೆ. ಆಮೇಲೆ ಪಟ್ಟಣ ಪ್ರದೇಶದಲ್ಲಿ ಕಟ್ಟಿಗೆ ಇದ್ದಿಲು ಸಿಗದೆ ಬಹಳ ತೊಂದರೆಯಾಗಿದೆ. ಗ್ಯಾಸ್ ಸಿಲಿಂಡರ್ ಸಿಗದೆ ಬೇಕು ಅಂದರೆ ಪಡಿತರ ಚೀಟಿ ಕೇಳುತ್ತಾರೆ. ಇದನ್ನೆಲ್ಲ ಗಮನದಲ್ಲಿಟ್ಟುಕೊಂಡು ಆದಷ್ಟು ಜಾಗ್ರತೆ ತಪ್ಪು ಮಾಹಿತಿ ನೀಡಿರುವುದನ್ನು ಸರಿಪಡಿಸಿ ಉಳಿದ ಬಡ ಜನರಿಗೆ ಹಳ್ಳಿಗಾಡಿನಲ್ಲಿ ತೊಂದರೆಯಾಗಿರುವುದರಿಂದ ಹಸಿರು ಕಾರ್ಡು ವಿತರಿಸಲು ಕ್ರಮ ಕೈಗೊಳ್ಳುವರೇ ಎಂದು ಸಚಿವರನ್ನು ಕೇಳುತ್ತೇನೆ.

ಶ್ರೀ ಡಿ.ಬಿ. ಇನಾಂದಾರ್ : ಅಧ್ಯಕ್ಷರೇ ನೆಲಮಂಗಲ ತಾಲ್ಲೂಕಿನಲ್ಲಿ ಇರುವುದು ಪ್ರೊಜೆಕ್ಟೆಡ್ ಕುಟುಂಬಗಳು 28,739, ಇದು 1991ರದ್ದು. ಅದೇ 2 ಸಾವಿರದ ಇಸವಿಗೆ ಆ ಅಂಕಿ 32,655. ಆದ್ದರಿಂದ ನೆಲಮಂಗಲ ತಾಲ್ಲೂಕಿನಲ್ಲಿ ನಾವು ವಿತರಣೆ ಮಾಡಿದ ಕಾರ್ಡುಗಳ ಸಂಖ್ಯೆ, ಹಸಿರು ಕಾರ್ಡುಗಳು 38,479, ಕೇಸರಿ ಕಾರ್ಡು-3,370, ಒಟ್ಟು 45,878. ನಮ್ಮಲ್ಲಿ ಪೆಂಡಿಂಗಿರುವ ಅರ್ಜಿಗಳು 1,058. ಇದರ ಬಗ್ಗೆ ವಿಚಾರ ಮಾಡಿ ಅರ್ಹರಿರುವವರಿಗೆ ಹಸಿರುಕಾರ್ಡು ಕೊಡಬೇಕೆಂಬ ದೃಷ್ಟಿಯಿಂದ ನಾವು ಆಗಲೇ ಆದೇಶ ಮಾಡ್ಡಿದ್ದೇವೆ, ಫೆಬ್ರವರಿ ಫಸ್ಟ್‌ಗೆ ಸರ್ಕ್ಯೂಲರ್ ಹೊರಡಿಸಿದ್ದೇವೆ. ಆದರೆ ಇದರಲ್ಲಿ ನನಗೆ ಕಂಡುಬಂದದ್ದು ಏನೆಂದರೆ ಇದರಲ್ಲಿ ಬೋಗಸ್ ಕಾರ್ಡುಗಳು ಬಹಳ

ಇವೆ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ ಹೇಳಿದರು, ಸುಮಾರು 966 ಕೋಟಿ ರೂಪಾಯಿಗಳಷ್ಟು ಸಬ್ಸಿಡಿ ಮುಂದಿನ ವರ್ಷಕ್ಕೆ ಕೊಡುವ ಪರಿಸ್ಥಿತಿ ಇದೆ ಎಂದು ಆದರೆ, ನಾವು ಕೊಟ್ಟಿರುವ ಕಾರ್ಡುಗಳ ಸಂಖ್ಯೆ ನೋಡಿದರೆ 58.79 ಪರ್ಸೆಂಟ್‌ಗಿಂತ ಜಾಸ್ತಿ ಹಸಿರು ಕಾರ್ಡು ಕೊಟ್ಟಿದ್ದೇವೆ. ಯೋಜನಾ ಆಯೋಗ ಕೇವಲ 34 ಪರ್ಸೆಂಟ್ ಮಾತ್ರ ಎಲಿಜಿಬಲ್ ಫ್ಯಾಮಿಲಿ ಎಂದು ಕಂಡುಹಿಡಿದು, ಕೇಂದ್ರದಿಂದ ಬರುವ ಸಬ್ಸಿಡಿ ಕೇವಲ 28 ಲಕ್ಷ ಕುಟುಂಬಗಳಿಗೆ ಮಾತ್ರ. ಆದರೆ ನಮ್ಮಲ್ಲಿರುವ 65 ಲಕ್ಷ ಕುಟುಂಬಗಳಿಗೆ ಈಗಾಗಲೇ ನಾವು ಹಸಿರು ಕಾರ್ಡು ಕೊಟ್ಟಿದ್ದೇವೆ. ಈ ಬೋಗಸ್ ಕಾರ್ಡು ಬಹಳ ಇವೆ ಎಂಬ ದೃಷ್ಟಿಯಿಂದ ಕಂಪ್ಯೂಟರೈಜೇಶನ್ ಮಾಡಿ ಅವನ್ನು ಎಲಿಮಿನೇಟ್ ಮಾಡಬೇಕೆಂಬ ವಿಚಾರ ಇಟ್ಟುಕೊಂಡಿದ್ದೇವೆ. ಒಂದು ಮಾತು ನಾನು ಹೇಳಲು ಬಯಸುವುದೇನೆಂದರೆ ಎಲಿಜಿಬಲ್ ಇರುವವರು ಯಾರೇ ಇದ್ದರೂ ಅವರಿಗೆ ಕಾರ್ಡು ಒದಗಿಸುವ ವ್ಯವಸ್ಥೆ ನಾವು ಮಾಡುತ್ತೇವೆ. ಮೊದಲಿನ ಪರಿಸ್ಥಿತಿ ಏನಿತ್ತು ಅಂದರೆ ಹಸಿರು ಕಾರ್ಡು ಕೊಡುವುದನ್ನು ಒಂದು ಡ್ರೈವ್ ಎಂದು ಮಾಡುತ್ತಿದ್ದರು.

12.00 ಪಿ.ಎಂ

ಶ್ರೀ ಅಂಜನಮೂರ್ತಿ : ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿದ ಬಜೆಟ್‌ನಲ್ಲಿ ಸಬ್ಸಿಡಿಯನ್ನು ಹೆಚ್ಚಿಗೆ ಕೊಡುತ್ತೇವೆ ಎಂದು ಹೇಳಿದ್ದಾರೆ. ಅದನ್ನು ನಾನು ಸ್ವಾಗತಿಸುತ್ತೇನೆ. ಆದರೆ ಮಾನ್ಯ ಮಂತ್ರಿಗಳು ಇಲ್ಲಿ ಉತ್ತರ ಕೊಟ್ಟಿರುವುದೇನೆಂದರೆ ಫೆಬ್ರವರಿ ತಿಂಗಳಲ್ಲಿಯೇ ಎಲ್ಲಾ ಅರ್ಜಿಗಳನ್ನು ವಿತರಣೆ ಮಾಡಿ ಹಸಿರು ಕಾರ್ಡುಗಳನ್ನು ವಿತರಿಸುತ್ತೇವೆಂದು ಹೇಳಿದ್ದಾರೆ. ಮತ್ತೆ ಬೋಗಸ್ ಕಾರ್ಡ್ ಬಗ್ಗೆ ಹೆಚ್ಚಿನ ಮಾಹಿತಿಯನ್ನು ನೀಡಿಲ್ಲ. ಉಳ್ಳವರೇ ಬೋಗಸ್ ಕಾರ್ಡುಗಳನ್ನು ಪಡೆದು ಅದರಿಂದ ಆಹಾರವನ್ನು ಪಡೆಯುತ್ತಿದ್ದಾರೆ. ನಿಜವಾದ ಬಡವರು ಅವರಿಗೆ ಕಾರ್ಡ್ ವಿತರಣೆಯಾಗದೆ ಅವರು ತೊಂದರೆಯನ್ನುಭವಿಸುತ್ತಿದ್ದಾರೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ತುರ್ತು ಕ್ರಮ ಕೈಗೊಳ್ಳಬೇಕೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ಕೇಳುತ್ತಿದ್ದೇನೆ.

ಶ್ರೀ ಡಿ.ಬಿ. ಇನಾಂದಾರ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಅಂಜನಮೂರ್ತಿಯವರು ಹೇಳಿದ ಒಂದು ಪ್ರಕರಣ ಅದೊಂದು ಸೂಕ್ತವಾದ ಪ್ರಕರಣ. ಇವತ್ತು ಹಸಿರು ಕಾರ್ಡ್‌ಗಳು ಅರ್ಹ ಇರುವ ಬಹಳಷ್ಟು ಜನರಿಗೆ ಸಿಕ್ಕಿಲ್ಲ. ಆದರೆ ಸ್ಥಿತಿವಂತರಿಗೆ ಹಸಿರು ಕಾರ್ಡು ಸಿಕ್ಕಿರುವ ಮಾಹಿತಿ ನಮಗೆ ಮುಟ್ಟಿದೆ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಅವರುಗಳನ್ನು ಎಲಿಮಿನೇಟ್ ಮಾಡಬೇಕೆಂದು ಕಂಪ್ಯೂಟರೈಜೇಷನ್ ಪ್ರೋಸೆಸ್ ಮಾಡಿ ಬೋಗಸ್ ಕಾರ್ಡ್ ಹೊಂದಿರುವವರನ್ನು ಎಲಿಮಿನೇಟ್ ಮಾಡಿ ಅರ್ಹರು ಇರುವವರು ಅಂದರೆ 6400 ರೂಪಾಯಿಗಳು ಗ್ರಾಮಾಂತರ ಪ್ರದೇಶದಲ್ಲಿ 11 ಸಾವಿರ ರೂಪಾಯಿಗಳು ಪಟ್ಟಣ ಪ್ರದೇಶದಲ್ಲಿ ಈ ರೀತಿ ಆದಾಯದ ಮೇಲೆ ನಾವು ಹಸಿರು ಕಾರ್ಡುಗಳನ್ನು ವಿತರಣೆ ಮಾಡುತ್ತಿದ್ದೇವೆ.

ಶ್ರೀ ಅಂಜನಮೂರ್ತಿ : ಮಾನ್ಯ ಅಧ್ಯಕ್ಷರೇ, ಯಾವಾಗ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಾರೆ ಎಂದು ಹೇಳಬೇಕು. ಇದ್ದಂಥ ಕಾರ್ಡುಗಳನ್ನು ವಾಪಸ್ ಪಡೆದುಕೊಂಡಿದ್ದಾರೆ. ಬಡ ಜನರು ಆಹಾರವನ್ನು ಕೊಳ್ಳುವುದಕ್ಕೆ ಅವರಿಗೆ ಶಕ್ತಿ ಇಲ್ಲ. ಪೇಟೆಗೆ ಹೋಗಿ ಆ ಧಾರಣೆ ಕೊಟ್ಟು ಕೊಂಡುಕೊಳ್ಳುವುದಕ್ಕೆ ಶಕ್ತಿ ಇಲ್ಲ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೇ, ಬೋಗಸ್ ಕಾರ್ಡುಗಳು ಇರುವ ಜಾಗವನ್ನು ಎಲ್ಲಿಯೂ ಹುಡುಕಬೇಕಾಗಿಲ್ಲ. ಖಾಸಗಿ ಅಂಗಡಿಗಳವರೇ ಆ ಕಾರ್ಡುಗಳನ್ನು ಇಟ್ಟುಕೊಂಡಿದ್ದಾರೆ. ನೀವು ರಾಜ್ಯಾದ್ಯಂತ ಎಲ್ಲ ಕಡೆ ರೈಡ್ ಮಾಡಿದರೆ ಪೂರ್ತಿ ಬೋಗಸ್ ಕಾರ್ಡುಗಳೇ ನಿಮಗೆ ಸಿಗುತ್ತದೆ. ಅವರೇ ಅದನ್ನು ಮಾಡಿಸಿ ಇಟ್ಟುಕೊಂಡಿದ್ದಾರೆ. ಇದನ್ನು ಸರಿ ಮಾಡಬೇಕೆಂದು ಅವರಲ್ಲಿ ಕೇಳುತ್ತೇನೆ.

ಶ್ರೀ ಡಿ.ಬಿ. ಇನಾಂದಾರ್ : ಬೋಗಸ್ ಕಾರ್ಡುಗಳನ್ನು ಎಲಿಮಿನೇಟ್ ಮಾಡಬೇಕೆಂದು ಡ್ರೈವ್ ಮಾಡಿ ಹತ್ತು ಲಕ್ಷ ಕಾರ್ಡುಗಳನ್ನು ಎಲಮಿನೇಟ್ ಮಾಡಿದರು. ಅದರ ನಂತರ 16 ಲಕ್ಷ ಕಾರ್ಡುಗಳನ್ನು ಕೊಟ್ಟರು. ಯಾರ್ಯಾರು ಇದರಲ್ಲಿ ನಿಜವಾದ ಬಡವರಿದ್ದರು, ಅವರ ಕಾರ್ಡುಗಳು ಮಾತ್ರ ಎಲಿಮಿನೇಟ್ ಆದವು. ನಮ್ಮ ರಾಜ್ಯದಲ್ಲಿ ಸ್ಥಿತಿವಂತರ ಕಾರ್ಡು ಮಾತ್ರ ಎಲಿಮಿನೇಟ್ ಆಗಿಲ್ಲ.

ಪೊಲೀಸ್ ಸಿಬ್ಬಂದಿಗಳ ನೇಮಕಾತಿ

98 - ಶ್ರೀ ಸದಾನಂದಗೌಡ ಡಿ.ವಿ. (ಪುತ್ತೂರು) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ರಾಜ್ಯದಲ್ಲಿ ಪೊಲೀಸ್ ಇಲಾಖೆಯಲ್ಲಿ 1998-99, 1999-2000 ಇಸ್ವಿಯಲ್ಲಿ ನೇಮಕ ಮಾಡಿಕೊಂಡಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು (ಐ.ಜಿ.ಪಿ.ಯಿಂದ ಪೊಲೀಸ್ ಕಾನ್ಸ್‌ಟೇಬಲ್‌ವರೆಗೆ) ಇನ್ನು ಎಷ್ಟು ಸಿಬ್ಬಂದಿ ಅವಶ್ಯಕತೆ ಇದೆ, ಎಂದು ನೇಮಕ ಮಾಡಿಕೊಳ್ಳಲಾಗುವುದು?*

ಆ) *ಸಿಬ್ಬಂದಿಗಳ ಕೊರತೆಯಿರುವ ಗ್ರಾಮಾಂತರಗಳಲ್ಲಿ ಪೊಲೀಸ್ ಕಾರ್ಯನಿರ್ವಹಣೆ ತೊಡಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಈ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?*

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :

ಅ) ಡಿ.ಜಿ.ಪಿ., ಎ.ಡಿ.ಜಿ.ಪಿ., ಐ.ಜಿ.ಪಿ., ಡಿ.ಐ.ಜಿ.ಪಿ. ಪಿ.ಐ., ಎ.ಎಸ್.ಐ ಮತ್ತು ಹೆಚ್.ಸಿ. ಹುದ್ದೆಗಳನ್ನು ಬಡ್ತಿಯಿಂದ ತುಂಬಲಾಗುತ್ತಿದೆ. ಡಿ.ಎಸ್.ಪಿ. ಮತ್ತು ಪಿ.ಎಸ್.ಐ ಹುದ್ದೆಗಳನ್ನು ಬಡ್ತಿಯಿಂದ ಮತ್ತು ನೇರ ನೇಮಕಾತಿಯಿಂದ ತುಂಬಲಾಗುತ್ತಿದೆ. ಪಿ.ಸಿ. ಹುದ್ದೆಗಳನ್ನು ನೇರ ನೇಮಕಾತಿಯಿಂದ ತುಂಬಲಾಗುತ್ತಿದೆ. ವಿವರಗಳನ್ನು ಈ ಕೆಳಗೆ ನೀಡಲಾಗಿದೆ.